# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1022

ಸದಸ್ಯರ ಹೆಸರು : ಶ್ರೀ.ಕೆ.ಎಸ್. ನವೀನ್ (ಸ್ಥಳೀಯಸಂಸ್ಥೆಗಳಕ್ಷೇತ್ರ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 24-02-2023

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೆಚ್ಚಾಗಿ ತೆಂಗು ಬೆಳೆಯುವ ಜಿಲ್ಲೆಗಳಾದ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ತೆಂಗಿನ ಉತ್ಪನ್ನಗಳಾದ ಎಳೆನೀರು, ತೆಂಗಿನಕಾಯಿ ಮತ್ತು ಕೊಬ್ಬರಿ ಇವುಗಳಿಗೆ ಸರ್ಕಾರ ಪ್ರತಿ ವರ್ಷ ಬೆಂಬಲ ಬೆಲೆ ನಿಗದಿ ಮಾಡಿದೆಯೇ; | ಹೌದು.<br>ಕೇಂದ್ರ ಸರ್ಕಾರವು 2022-23 ನೇ ಸಾಲಿನಲ್ಲಿ ಉಂಡೆ ಕೊಬ್ಬರಿಗೆ ಪ್ರತಿ ಕ್ವಿಂಟಾಲ್ ಗೆ ರೂ.11,750/-ಮತ್ತು ಮಿಲ್ಲಿಂಗ್ ಕೊಬ್ಬರಿಗೆ ಪ್ರತಿ ಕ್ವಿಂಟಾಲ್ ಗೆ ರೂ.10860/- ಹಾಗೂ ಸುಲಿದ ತೆಂಗಿನಕಾಯಿಗೆ ಪ್ರತಿ ಕ್ವಿಂಟಾಲ್ ಗೆ ರೂ. 2860/- ಬೆಂಬಲ ಬೆಲೆ ನಿಗದಿ ಮಾಡಿದೆ. |
| ಆ) | ತೆಂಗು ಮತ್ತು ನಾರು ಅಭಿವೃದ್ಧಿ ಮಂಡಳಿ ವತಿಯಿಂದ ಮೌಲ್ಯವರ್ಧನೆ ಮತ್ತು ಸಬ್ಸಿಡಿಗಳನ್ನು ಎಷ್ಟು ರೈತರಿಗೆ ವಿತರಿಸಲಾಗಿದೆ; | ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಮೌಲ್ಯವರ್ಧನೆಗೆ ತುಮಕೂರು ಜಿಲ್ಲೆಯ ಒಬ್ಬ ರೈತರಿಗೆ ಹಾಗೂ ತುಮಕೂರು (1789) ಮತ್ತು ಚಿತ್ರದುರ್ಗ(296) ಜಿಲ್ಲೆಯಲ್ಲಿ ಒಟ್ಟಾರೆ 2085 ರೈತರಿಗೆ 2022-23 ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಡಿ ಸಬ್ಸಿಡಿಗಳನ್ನು ವಿತರಿಸಲಾಗಿದೆ.<br><br>ತೆಂಗಿನ ನಾರಿನ ಅಭಿವೃದ್ಧಿ ಮಂಡಳಿ ವತಿಯಿಂದ ಮೌಲ್ಯವರ್ಧನೆ ಮತ್ತು ಸಬ್ಸಿಡಿಗಳನ್ನು ರೈತರಿಗೆ ವಿತರಿಸಿರುವುದಿಲ್ಲವೆಂದು ಸದರಿ ಮಂಡಳಿ ವರದಿ ಮಾಡಿದೆ |
| ಇ) | ರಾಜ್ಯದಿಂದ ಕೇಂದ್ರ ತೆಂಗು ಅಭಿವೃದ್ಧಿಯ ಅನುದಾನ ಪಡೆದುಕೊಳ್ಳಲು ಯಾವ ಕ್ರಮವನ್ನು ವಹಿಸಲಾಗಿದೆ? | 2022-23 ನೇ ಸಾಲಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ರೂ.10.52 ಕೋಟಿಗಳ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಈವರೆಗೆ ರೂ.10.23 ಕೋಟಿಗಳನ್ನು ತೆಂಗು ಅಭಿವೃದ್ಧಿ ಮಂಡಳಿಯಿಂದ ಪಡೆಯಲಾಗಿದ್ದು ಈ ಮೊತ್ತವು ಶೇ 100 ರಷ್ಟು ತೆಂಗು ಅಭಿವೃದ್ಧಿ ಮಂಡಳಿಯ ಪಾಲಾಗಿರುತ್ತದೆ. ಅಲ್ಲದೆ ಈ ಸಾಲಿನಲ್ಲಿ ಹೆಚ್ಚುವರಿಯಾಗಿ ರೂ.15.06 ಕೋಟಿಗಳ ಕಾರ್ಯಕ್ರಮಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ತೆಂಗು ಅಭಿವೃದ್ಧಿ ಮಂಡಳಿ ರವರಿಂದ ಅನುದಾನದ ನಿರೀಕ್ಷೆಯಲ್ಲಿದೆ. |

**HORTI 114 HGM 2023**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು